# ಕಮಾಆ 12806 ಎಪಿಎಲ್ 2017

**ನ್ಯಾಯಾಲಯ ಸಭಾಂಗಣ-5**

**ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು**

**ಮಾಹಿತಿ ಸೌಧ, ದೇವರಾಜ್ ಅರಸ್ ರಸ್ತೆ, ವಿಧಾನಸೌಧದ ಪಶ್ಚಿಮ ದ್ವಾರ-02 ರ ಎದುರು, ಬೆಂಗಳೂರು-01**

**ಆಯೋಗದ ಅಂತರ್‌ಜಾಲ www.kic.gov.in**

**(ಶ್ರೀ ಎಸ್.ಪಿ ಶಿವಾನಂದ. ವಿರುದ್ಧ 1)ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಹೊಸಮನೆ ಶಿವಾಜಿ ಸರ್ಕಲ್, ಪೊಲೀಸ್ ಠಾಣೆ, ಓಲ್ಡ್, ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ. 2)ಪ್ರಥಮ ಮೇಲ್ಮನವಿ ಪ್ರಾಧಿಕಾರಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಅಫ್ ಪೊಲೀಸ್, ಓಲ್ಡ್, ಟೌನ್, ಸರ್ಕಲ್ ಭದ್ರಾವತಿ, ಶಿವಮೊಗ್ಗ ಜಿಲ್ಲೆ.)**

**ಆದೇಶ**

ದಿನಾಂಕ: 12-07-2018

1. ಅರ್ಜಿದಾರರು ಹಾಜರಿರುತ್ತಾರೆ. ಪ್ರತಿವಾದಿ ಪರವಾಗಿ ಪರವಾಗಿ ಶ್ರೀ ಕಲೀಮುಲ್ಲ ಖಾನ್, ಎ.ಎಸ್.ಐ., ಹೊಸಮನೆ ಶಿವಾಜಿ ಸರ್ಕಲ್, ಪೊಲೀಸ್ ಠಾಣೆ, ಓಲ್ಡ್ ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ ರವರು ಹಾಜರಿರುತ್ತಾರೆ.
2. ಅರ್ಜಿದಾರರು ದಿನಾಂಕ: 24-06-2017 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಹೊಸಮನೆ ಶಿವಾಜಿ ಸರ್ಕಲ್, ಪೊಲೀಸ್ ಠಾಣೆ, ಓಲ್ಡ್ ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ. ರವರಲ್ಲಿ ಈ ಕೆಳಕಂಡಂತೆ ಮಾಹಿತಿಯನ್ನು ಕೋರಿರುತ್ತಾರೆ.

To furnish copies of papers leading to raising of FIR No.06/27 and all the papers leading to the issue of B Report i.e., Statements obtained, documents referred and collected, B Report.

3. ನಂತರ ಅರ್ಜಿದಾರರು ಮಾಹಿತಿ ಹಕ್ಕು ಕಾಯ್ದೆ ಕಲಂ 19(1) ರನ್ವಯ ದಿನಾಂಕ: 26-06-2017 ರಂದು ಮೊದಲನೇ ಮೇಲ್ಮನವಿಯನ್ನು ಪ್ರಥಮ ಮೇಲ್ಮನವಿ ಪ್ರಾಧಿಕಾರಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಅಫ್ ಪೊಲೀಸ್, ಓಲ್ಡ್, ಟೌನ್, ಸರ್ಕಲ್ ಭದ್ರಾವತಿ, ಶಿವಮೊಗ್ಗ ಜಿಲ್ಲೆ. ರವರಿಗೆ ಸಲ್ಲಿಸಿರುತ್ತಾರೆ.
4. ತದನಂತರ ಅರ್ಜಿದಾರರು ಮಾಹಿತಿ ಹಕ್ಕು ಕಾಯ್ದೆ ಕಲಂ 19(3) ರನ್ವಯ ದಿನಾಂಕ: 27-10-2017 ರಂದು ಆಯೋಗಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.
5. ಆಯೋಗವು ಉಭಯತ್ರರರಿಗೂ ದಿನಾಂಕ: 15-06-2018 ರಂದು ನೋಟೀಸ್ ಜಾರಿಗೊಳಿಸಿತ್ತು.
6. **ದಿನಾಂಕ: 11-07-2018 ರಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ, ಭದ್ರಾವತಿ ರವರು ಆಯೋಗಕ್ಕೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.**
7. **ಪ್ರತಿವಾದಿಯು ಅರ್ಜಿದಾರರು ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ಠಾಣಾ ಗುನ್ನ ನಂ.06/27 ರಲ್ಲಿ ವಿಚಾರಣೆ ನಡೆಸಿ 'ಬಿ' ರಿಪೋರ್ಟ್ ಅನ್ನು ಸಲ್ಲಿಸಿದ್ದು, ಸದರಿ ಮಾಹಿತಿಯನ್ನು ಅರ್ಜಿದಾರರಿಗೆ ಒದಗಿಸಿರುವುದಾಗಿ ಆಯೋಗಕ್ಕೆ ತಿಳಿಸಿರುತ್ತಾರೆ.**
8. **ಅರ್ಜಿದಾರರೂ ಸಹ 'ಬಿ' ರಿಪೋರ್ಟ್ ಅನ್ನು ತಾವು ಚಾಲೆಂಜ್ ಮಾಡಿರುವುದಾಗಿ ಆಯೋಗಕ್ಕೆ ತಿಳಿಸಿರುತ್ತಾರೆ.**

9. ಆಯೋಗವು ಉಭಯತ್ರರ ಹೇಳಿಕೆಯನ್ನು ಪರಿಗಣಿಸಿ, ಪ್ರತಿವಾದಿಯು ಅರ್ಜಿದಾರರು ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ಠಾಣಾ ಗುನ್ನ ನಂ.06/27 ರಲ್ಲಿ ವಿಚಾರಣೆ ನಡೆಸಿ 'ಬಿ' ರಿಪೋರ್ಟ್ ಅನ್ನು ಸಲ್ಲಿಸಿದ್ದು, ಸದರಿ ಮಾಹಿತಿಯನ್ನು ಅರ್ಜಿದಾರರಿಗೆ ಒದಗಿಸಿರುವುದಾಗಿ ತಿಳಿಸಿರುವುದನ್ನು ಪರಿಗಣಿಸಿ, ಪ್ರತಿವಾದಿಯು ಅರ್ಜಿದಾರರಿಗೆ ಮಾಹಿತಿಯನ್ನು ಒದಗಿಸಿರುವುದರಿಂದ, ಇನ್ನು ಮುಂದೆ ಮಾಹಿತಿ ಕೋರಿ ಬರುವ ಅರ್ಜಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 8(1)ರಡಿಯಲ್ಲಿ ವಿನಾಯಿತಿಗೆ ಒಳಪಟ್ಟ ಮಾಹಿತಿಗಳನ್ನು ಹೊರತುಪಡಿಸಿ ತಮ್ಮ ಪ್ರಾಧಿಕಾರದ ಬಳಿ ಲಭ್ಯವಿರುವ ಮಾಹಿತಿಯನ್ನು ಒದಗಿಸಲು ಬಯಸಿದಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 7(3)(ಎ)ರ ಅನ್ವಯ ನಿಗಧಿತ ಅವಧಿಯೊಳಗೆ ಅರ್ಜಿದಾರರಿಗೆ ಶುಲ್ಕವನ್ನು ಪಾವತಿಸಲು ಸೂಚಿಸಿ, ನಂತರ ಅರ್ಜಿದಾರರಿಂದ ಶುಲ್ಕವನ್ನು ಪಾವತಿಸಿಕೊಂಡು ಮಾಹಿತಿಯನ್ನು ಒದಗಿಸುವುದು. ಒಂದು ವೇಳೆ ಕೋರಿರುವ ಮಾಹಿತಿಯು ತಮ್ಮ ಪ್ರಾಧಿಕಾರದ ಬಳಿ ಲಭ್ಯವಿಲ್ಲದಿದ್ದಲ್ಲಿ ಬೇರೆ ಯಾವ ಸಾರ್ವಜನಿಕ ಪ್ರಾಧಿಕಾರದ ಬಳಿ ಕೋರಿರುವ ಮಾಹಿತಿಯು ಲಭ್ಯವಿರುತ್ತದೋ ಆ ಸಾರ್ವಜನಿಕ ಪ್ರಾಧಿಕಾರಕ್ಕೆ ಅರ್ಜಿದಾರರ ಮಾಹಿತಿ ಕೋರಿಕೆ ಅರ್ಜಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 6(3)ರಡಿಯಲ್ಲಿ 5 ದಿನಗಳಲ್ಲಿ ವರ್ಗಾಯಿಸಿ, ಅದರಂತೆ ಅರ್ಜಿದಾರರಿಗೆ ಸೂಚಿಸಬೇಕೆಂದು ಪ್ರತಿವಾದಿಯವರಿಗೆ ನಿರ್ದೇಶಿಸಿ, ಇನ್ನು ಮುಂದೆ ಮಾಹಿತಿ ಕೋರಿ ಬರುವ ಅರ್ಜಿಗಳಿಗೆ ನಿಯಮಾನುಸಾರ ಕ್ರಮ ವಹಿಸಬೇಕೆಂದು ಎಚ್ಚರಿಕೆ ನೀಡಿ, ಸದರಿ ಪ್ರಕರಣವನ್ನು ವಿಲೇವಾರಿ ಮಾಡಿದೆ.

10. ಉಕ್ತಲೇಖನ ಕೊಟ್ಟು, ಕರಡು ಪ್ರತಿಯನ್ನು ತಿದ್ದಿ, ನನ್ನ ರುಜುವಿನೊಂದಿಗೆ ದಿನಾಂಕ: 12–07–2018 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಪಿ.ಜಿ. ವಿಜಯಕುಮಾರ)
ರಾಜ್ಯ ಮಾಹಿತಿ ಆಯುಕ್ತರು

| ಕಮಾಆ 12806 ಎಪಿಎಲ್ 2017 | ಕಮಾಆ 12806 ಎಪಿಎಲ್ 2017 |
|---|---|
| 1. ಶ್ರೀ ಎಸ್.ಪಿ ಶಿವಾನಂದ. ಎಮ್.ಐ.ಜಿ. 262/ಎಮ್.ಎಸ್.ಬಿ. 8ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಗೋಪಿಶೆಟ್ಟಿಕೊಪ್ಪ, ಶಿವಮೊಗ್ಗ–577 205. | 2. ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಬ್‌ಇನ್ಸ್‌ಪೆಕ್ಟರ್ ಅಫ್ ಪೋಲೀಸ್, ಹೊಸಮನೆ ಶಿವಾಜಿ ಸರ್ಕಲ್, ಪೋಲೀಸ್ ಠಾಣೆ, ಓಲ್ಡ್ ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ–577 303. |
| **ಕಮಾಆ 12806 ಎಪಿಎಲ್ 2017** | |
| 3. ಪ್ರಥಮ ಮೇಲ್ಮನವಿ ಪ್ರಾಧಿಕಾರಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಅಫ್ ಪೋಲೀಸ್, ಓಲ್ಡ್, ಟೌನ್, ಸರ್ಕಲ್ ಭದ್ರಾವತಿ, ಶಿವಮೊಗ್ಗ ಜಿಲ್ಲೆ–577 303. | |

KARNATAKA INFORMATION COMMISSION

1. ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ತಮ್ಮ ಹೆಸರು, ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
2. ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲರೂ ಆಯೋಗಕ್ಕೆ ಅಥವಾ ಇತರರಿಗೆ ಪತ್ರ ವ್ಯವಹಾರ ಮಾಡುವಾಗ/ಮಾಹಿತಿ ಸಲ್ಲಿಸುವಾಗ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಪ್ರಕರಣ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.